ಶ್ರೀ ಸಿ.ಬೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರಿನ ಇಂಡಿಯನ್ ಜಮಖಾನ ಮೈದಾನದ ಬಗ್ಗೆ ಮುಖ್ಯಮಂತ್ರಿಗಳ ಹೇಳಿಕೆ ಕೊಡಬೇಕಾಗಿದೆ. ಇದು 3-4 ಸಲ ಮುಂದಕ್ಕೆ ಹೋಗಿದೆ. ದಯವಿಟ್ಟು ಅದಕ್ಕೆ ಅವಕಾಶ ಮಾಡಿ ಕೊಡಿ.

ಮುಖ್ಯಮಂತ್ರಿಗಳ ಹೇಳಿಕೆ

ವಿಷಯ : ಬೆಂಗಳೂರಿನ ಇಂಡಿಯನ್ ಜಮಖಾನ ಮೈದಾನಕ್ಕೆ ನೀಡಿರುವ ಜಮೀನಿನ ಬಗ್ಗೆ :-

*ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) ಸನ್ಮಾನ್ಯ ಉಪಾಧ್ಯಕ್ಷರೇ, ಈಗ ಮಾನ್ಯ ಸದಸ್ಯರಾದಂಥ ಶ್ರೀ ಬೈರೇಗೌಡರು ಒಂದು ಭೂಮಿಗೆ ಸಂಬಂಧಪಟ್ಟ ವಿಚಾರವನ್ನು ಇಲ್ಲಿ ಎತ್ತಿದ್ದಾರೆ. ಈ ಬೆಂಗಳೂರು ಮಹಾನಗರಪಾಲಿಕೆಯವರು ಸುಮಾರು 560 feet x 208/2 feet x 405 feet plus 370 feet, wheeler Road, Cox Town Bangalore ಇದಕ್ಕೆ ಸಂಬಂಧಪಟ್ಟಂಥ ಜಮೀನನ್ನು ಇಂಡಿಯನ್ ಜಮಖಾನ ಕ್ಲಬಿಗೆ ಕೊಟ್ಟಿದ್ದಾರೆ. ಅದರ ಲೀಸ್ ಅವಧಿ 35 ವರ್ಷಗಳು 18.6.73ರಿಂದ ಅದರ ವಾರ್ಷಿಕ ಬಾಡಿಗೆ ರೂ.75 ಇದನ್ನು ಲೀಸ್‌ಗೆ ಪಡೆದ ಮೇಲೆ ಅವರು ಅದರ ಮೇಲೆ ಕಟ್ಟಡವನ್ನು ಕಟ್ಟಲಿಕ್ಕೆ ಕ್ರಮ ತೆಗೆದುಕೊಂಡಿದ್ದಾರೆ ಅದು ಕೇರ್ ಬ್ರಿಲಿಯಾರ್ಡ್ಸ್ ಟೇಬಲ್ ಟೆನ್ನಿಸ್, ಗೇಮ್ಸ ರೂಂ, ಟಿವಿರೂಂ ಷೆಟಲ್ ಕಾಕ್ ಕೋರ್ಟು ಇದೆನ್ನೆಲ್ಲಾ ಇವತ್ತು ಕಟ್ಟಲಿಕ್ಕೆ ಈಗಾಗಲೇ ಪ್ರಾರಂಭ ಮಾಡಿದ್ದಾರೆ. ಲಾನ್ ಟೆನ್ನಿಸ್ ಗ್ರಾಂಡನ್ನು ಕೂಡ ಓಪನ್ ಫೀಲ್ಡ್‌ನಲ್ಲಿ ಮಾಡಬೇಕೆಂದು ಕ್ರಮ ತೆಗೆದುಕೊಂಡಿದ್ದಾರೆ. ಈಗ ತಾವು ಈ ವಿಚಾರವನ್ನು ಎತ್ತಿದಮೇಲೆ ಕಾರ್ಪೊರೇಷನ್ ಕಮಿಷನರ್ ಮತ್ತು ಪೋಲೀಸ್ ಕಮಿಷನರ್ ಇಬ್ಬರನ್ನೂ ಕೂಡ ಅಲ್ಲಿಗೆ ಕಳುಹಿಸಿದ್ದೇನೆ. ಅವರನ್ನು ಕಳುಹಿಸಿದ ಮೇಲೆ ಸಾಕಷ್ಟು ಸಾರ್ವಜನಿಕರ ಪ್ರತಿಭಟನೆ ವ್ಯಕ್ತವಾಗಿದೆ, ಏಕೆಂದರೆ ಆ ಜಾಗದಲ್ಲಿ ಅದು ಒಂದೇ ಸ್ಥಳ ಇದ್ದು ಸಾರ್ವಜನಿಕರಿಗೆ ಮತ್ತು ಆಟವಾಡುವುದಕ್ಕೆ ಬೇಕಾಗಿರುವಂತದ್ದು ಅದನ್ನು ಇವತ್ತು ಓಪನ್ ಗ್ರೌಂಡ್ಡಾಗಿ ಇಟ್ಟಿದ್ದರೆ ಸಾರ್ವಜನಿಕರು ಉಪಯೋಗ ಮಾಡಿಕೊಳ್ಳಬಹುದಾಗಿತ್ತು. ಅದನ್ನು ಲೀಸ್‌ಗೆ ಕೊಟ್ಟಿದುದ್ದು 72ರಲ್ಲಿ. ಈಗ ಮಕ್ಕಳಿಗೆ ಆಡಲಿಕ್ಕೆ ಸ್ಥಳವೇ ಇಲ್ಲ, ಯಾವಾಗಲೂ ಕೂಡ ನಗರಪಾಲಿಕೆಯವರ ಕರ್ತವ್ಯ ಏನಿರುತ್ತದೆ ಎಂದರೆ ಇಂತಹ ಒಂದು ಜಾಗವನ್ನು ಉಳಿಸಿ ಸಾರ್ವಜನಿಕರ ಉಪಯೋಗಕ್ಕೆ ಬಿಡಬೇಕು ಎಂಬುದು ಆದ್ದರಿಂದ ಸರ್ಕಾರ ಈ ಕಾರ್ಪೊರೇಷನ್ ಮತ್ತು ಪೋಲೀಸ್ ಕಮೀಷನರ್ ಅವರ ವರದಿ ಬಂದ ಮೇಲೆ ಕಾರ್ಪೊರೇಷನ್ನಿಗೆ ಒಂದು ಸೂಚನೆಯನ್ನು ಕಳುಹಿಸಬೇಕೆಂದು ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ಅದರ ಪ್ರಕಾರ ನಮ್ಮ ನಿರ್ಣಯದ ಪ್ರಕಾರ "To use the north eastern corner of the land to the extent of 1 Acre 4 Guntas on the same conditions of lease. ಲೀಸ್ ಪೂರ್ತಿ ಕ್ಯಾನ್ಸಲ್ ಮಾಡಲಿಕ್ಕೆ ಕಾನೂನು ಪ್ರಕಾರ ಕಷ್ಟವಾಗುತ್ತದೆ. "The Government would further direct the Corporation that the remaining land

measuring 3 Acres 24 Guntas be separated by compound wall and allowed to be used by the public as in the past by amending the lease deed to that extent."ಇಷ್ಟು ನಾವು ಆದೇಶ ಕೊಡುತ್ತಿದ್ದೇವೆ.

ಶ್ರೀ ಸಿ.ಬೈರೇಗೌಡ : ಸ್ವಾಮಿ, ಇಲ್ಲಿ ಪ್ರಶ್ನೆ ಇರತಕ್ಕಂತದ್ದು, ಈಗ ಅಲ್ಲಿ ಕಟ್ಟಡ ಕಟ್ಟುತ್ತಿದ್ದಾರೆ. ಅದು ಮೈದಾನದ ಮಧ್ಯದಲ್ಲಿ ಬರುತ್ತಾ ಇದೆ. ಅದು ನಿಮ್ಮ ಸಿಡಿಪಿ ಪ್ರಕಾರ ಮೈದಾನ ಎಂದು ನಮೂದಿಸಿದ್ದಾರೆ. It is the violation of the C.D.P., ವೈಲೇಷನ್ ಆಗಿದೆ ಸರ್ಕಾರ ಒಂದು ಸಾರಿ ಅದಕ್ಕೆ ಕಟ್ಟಡ ಕಟ್ಟಬಾರದು ಎನ್ನತಕ್ಕಂಥ ನಿರ್ದೇಶನ ಎಲ್‌ಪಿ ನಂ.555 ಅದು ರಿಜಕ್ಟ್ ಆಗಿದೆ. ರಿಜಕ್ಟ್ ಆಗಿದ್ದರೂ ಪುನಃ ಅದಕ್ಕೆ ಪರ್‌ಮಿಷನ್ ಕೊಟ್ಟಿದ್ದೀರಿ. ಅದು ನಿಮ್ಮ ಲೀಸ್ ಆಗ್ರಿಮೆಂಟ್ ಪ್ರಕಾರವೆ ಅದು ಓಪನ್ ಗ್ರಾಂಡ್ ಆಗಿರಬೇಕು ಎಂದು ಇದೆ. ಅದು ವೈಲೇಟ್ ಆಗಿದೆ, ಸಿಡಿಪಿ ವೈಲೇಟ್ ಆಗಿದೆ, ಸರ್ಕಾರದಿಂದ ಕಟ್ಟಡವನ್ನು ಕಟ್ಟುವುದಕ್ಕೆ ಅವಕಾಶ ಇಲ್ಲ ಎಂಬ ನಿರ್ದೇಶನ ಹೋಗಿದೆ. ಇಷ್ಟೆಲ್ಲಾ ಇದ್ದರೂ ಸಹ ಪುನಃ ಸರ್ಕಾರ ತನ್ನ ಅಭಿಪ್ರಾಯವನ್ನು ರಿವೈಸ್ ಮಾಡಿ ಅವರು ಇವತ್ತೊ ಕಟ್ಟಡವನ್ನು ಕಟ್ಟುತ್ತಿದ್ದಾರೆ. ಅಲ್ಲಿ ಸುಮಾರು 7-8 ಶಾಲೆಗಳಿದ್ದು ಆ ಮಕ್ಕಳೆಲ್ಲಾ ಮಧ್ಯಾಹ್ನದ ಹೊತ್ತು ಹೋಗಿ ತಿಂಡಿ ತಿನ್ನಬೇಕಾಗಿದ್ದರೆ ಇವತ್ತು ಅಲ್ಲಿ ಸ್ಥಳಾವಕಾಶ ಇಲ್ಲ, ಕಾಲುದಾರಿ ಮೇಲೆ ನಿಂತು ಮಕ್ಕಳು ಅಲ್ಲಿ ತಿಂಡಿಯನ್ನು ತಿನ್ನುತ್ತಿದ್ದಾರೆ. ಅದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಇವತ್ತು ಏನು ಕಟ್ಟಡ ಕಟ್ಟತಕ್ಕಂಥ ಕೆಲಸ ನಡೆಯುತ್ತಿದೆ ಅದನ್ನು ದಯವಿಟ್ಟು ನಿಲ್ಲಿಸಿ ಸ್ವಲ್ಪ ಸೂಕ್ಷ್ಮವಾಗಿ ಹೇಳಬೇಕಾದರೆ ಈ ಕ್ರಿಕೆಟ್ ಆಡತಕ್ಕಂಥ ವಸ್ತುಗಳು ಏನಿದ್ದಾವೆ ಬ್ಯಾಟ್ ಮ್ಯಾಟ್ ಅವುಗಳನ್ನು ಇಟ್ಟುಕೊಳ್ಳುವುದಕ್ಕೆ ಒಂದು ಸಣ್ಣ ಕೋಣೆ ಅಲ್ಲಿ ಇತ್ತು. ಮಿಕ್ಕಂತೆ ಮೈದಾನವೆಲ್ಲಾ ಬಯಲಾಗಿದ್ದು ಅಲ್ಲಿ ವೀಲರ್ ರಸ್ತೆಯನ್ನು ಅಗಲ ಮಾಡುವ ಪ್ರಮೇಯ ಬಂದಾಗ ಆ ಕಟ್ಟಡವನ್ನು ಒಡೆಯಬೇಕಾಗಿ ಬಂತು. ಆದರೆ ಆ ರಸ್ತೆ ಇನ್ನೂ ಆಗಲವಾಗಿಲ್ಲ. ಒಂಟೆಗೆ ಮೂತಿ ತೂರುವುದಕ್ಕೆ ಅವಕಾಶ ಕೊಟ್ಟರೆ ಅದರ ಶರೀರವನ್ನೇ ಎಂಬ ರೀತಿಯಲ್ಲಿ ಒಂದು ಸಣ್ಣ ಕೊಠಡಿಯನ್ನು ಒಡೆಯುವುದಕ್ಕೆ ಹೋಗಿ ಇವತ್ತು ದೊಡ್ಡ ಕಟ್ಟಡವನ್ನು ಕಟ್ಟಿದ್ದಾರೆ. ಅಲ್ಲಿ ಸುತ್ತಲೂ ಶಾಲೆಗಳು ಇವೆ. ಸಣ್ಣ ಸಣ್ಣ ಮಕ್ಕಳು ಓಡಾಡುತ್ತಾರೆ. ಅಲ್ಲಿ ಬಾರು ರೆಸ್ಟೋರೆಂಟ್ ನಡೆಸತಕ್ಕ ವ್ಯವಸ್ಥೆ ಆಗಿದೆ. ಬಾರು, ರೆಸ್ಟೋರೆಂಟುಗಳು ನಡೆಯುತ್ತಿವೆ. ತಮ್ಮ ವರದಿಯಲ್ಲಿ ಅದನ್ನೆಲ್ಲಾ ಹೇಳಿಲ್ಲ. ಇವತ್ತಿನ ದಿವಸ ತಾವು ಅದಕ್ಕೆಲ್ಲಾ ಅವಕಾಶ ಕೊಟ್ಟಿದ್ದೀರಿ. ಸುತ್ತಲೂ ಶಾಲೆಯ ವಾತಾವರಣ ಇರುವ ಕಡೆ ಬಾರು ರೆಸ್ಟೋರೆಂಟ್ ನಡೆಯುವುದಕ್ಕೆ ಅವಕಾಶ ಕೊಟ್ಟು ಪುನಃ ಎಕ್ಸ್‌ಟೆಂಡ್ ಮಾಡುತ್ತೇವೆಂದು ಹೇಳಿದರೆ. ಒಂದು ಸಾರಿ ವಜಾ ಮಾಡಿ ಮತ್ತೊಂದು ಸಾರಿ ಅದಕ್ಕೆ ಪರವಾನಗಿ ಕೊಡುತ್ತೇವೆಂದರೆ ಏನು ಹೇಳಬೇಕು ಅದಕ್ಕೆ ನಾನು ಮೊನ್ನೆ ಹೇಳಿದ್ದೇನೆ, ತಾವು ಆ ಸಂದರ್ಭದಲ್ಲಿ ಇರಲಿಲ್ಲ. Park must remain as park and play-ground must remain as play ground, ಎಂದು ತಾವು ಆರ್.ಟಿ.ನಗರದಲ್ಲಿ

ಒಂದು ಸಭೆಗೆ ಹೋಗಿದ್ದ ಸಂದರ್ಭದಲ್ಲಿ ಬಹಳ ದೊಡ್ಡ ದೊಡ್ಡ ಮಾತುಗಳನ್ನು ಹೇಳಿದ್ದೀರಿ. ತಾವು ಹೇಳಿರತಕ್ಕ ಮಾತು ಕಾರ್ಯತಃ ಕಾಣುತ್ತಿಲ್ಲ. ಇವತ್ತು ಅವರ ಅಗ್ರಿಮೆಂಟ್ ಪ್ರಕಾರ. it should be only preserved as open space.

ಉಪಾಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಪಾರ್ಕ್ ಓಪನ್ ಪಬ್ಲಿಕ್ ಪ್ಲೇಸ್ ಆಗಿರಬೇಕೆಂದು ಆ್ಯಕ್ಟ್ ಇದೆ. ಆದರೆ unfortunately, when I investigated into this, ಎಲ್ಲಾ ಜಿಲ್ಲಾಧಿಕಾರಿಗಳು ಅದನ್ನು ಐಡೆಂಟಿಫೈ ಮಾಡಿ ಸರ್ಕಾರಕ್ಕೆ ವರದಿಯನ್ನು ಕಳುಹಿಸಿ ನೋಟಿಫೈ ಮಾಡಬೇಕಾಗಿತ್ತು. unfortunately, it has not been done till today. ಅದು ಯಾವಾಗ ನಾವು ಮಾಡುವುದಿಲ್ಲ ಆಗ ಇಂಥ ದುರುಪಯೋಗ ಎಲ್ಲಾ ಆಗುತ್ತದೆ. ಈಗ ನೋಟಿಫೈ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುವಂತೆ ನಾನು ಆದೇಶ ಕೊಟ್ಟಿದ್ದೇನೆ. ಎಲ್ಲಾ ಜಿಲ್ಲಾಧಿಕಾರಿಗಳು, ಎಲ್ಲೆಲ್ಲಿ ಪಾಕ್ ಇದೆ. ಓಪನ್ ಪ್ಲೇಸಸ್ ಇದೆ ಅದನ್ನು ಐಡೆಂಟಿಫೈ ಮಾಡಬೇಕು ಎಂದು ಹೇಳಿದ್ದೇನೆ. Till such time, no permission what ever, anywhere in Karnataka or in Bangalore should be given for any lease. ಆದುದರಿಂದ ತಾವು ಏನು ಹೇಳಿದಿರಿ. ಅದು ಯಾವುದೂ ಕೊಟ್ಟಿಲ್ಲ. ನಾನು ಅಧಿಕಾರಕ್ಕೆ ಬಂದ ಮೇಲೆ ಒಂದು ಪಾರ್ಕ್ ಆಗಲಿ, ಪಬ್ಲಿಕ್ ಗ್ರೌಂಡ್ ಆಗಲಿ ಯಾವುದೊಂದು ಕೂಡ ಬಾಡಿಗೆಗೆ ಕೊಟ್ಟಿಲ್ಲ. ಇಲ್ಲಿ ಇದನ್ನು ಕೊಟ್ಟಿದ್ದು 1972 ರಲ್ಲಿ. ಆದರೆ ಇವತ್ತು ಓಪನ್ ಆಗಿ ಇಡುವ ಬದಲು ಅದಕ್ಕೆ ಎಷ್ಟು ಬೇಕು ಅಷ್ಟು ಕನ್ಸ್‌ಟ್ರಕ್ಷನ್ ಮಾಡುವ ಬದಲು ಇವತ್ತು ಕನ್‌ಸ್ಟ್ರಕ್ಷನ್ ಅನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಅದನ್ನು ಈಗ ನಾವು ನಿಲ್ಲಿಸಿದ್ದೇವೆ. ಈಗ ಒಂದು ಎಕರೆ 4 ಗುಂಟೆ ಜಾಗದಲ್ಲಿ ಕಟ್ಟಡ ಕಟ್ಟಿದ್ದಾರೆ. ಕಟ್ಟಿದಿದ್ದರೆ ಮರು ಪರಿಶೀಲನೆ ಮಾಡಿ ನೋಡೋಣ. ಆದರೆ ಉಳಿದಂಥ ಅಂದರೆ ಕಟ್ಟದೆ ಇರತಕ್ಕ 3 ಏಕರೆ 2 4 ಗುಂಟೆ ಏನಿದೆ ಅದಕ್ಕೆ ಕಾಂಪೌಂಡ್ ವಾಲ್ ಹಾಕಿ ಅದನ್ನು ಪಬ್ಲಿಕ್ ಪ್ಲೇಗ್ರೌಂಡ್ ಆಗಿ ಉಪಯೋಗ ಮಾಡುವುದಕ್ಕೆ ಬಿಡುತ್ತಿದ್ದೇವೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಅಲ್ಲಿ ಹಿಂದುಗಡೆ ಏನು ಕಟ್ಟುತ್ತಿದ್ದಾರೆ, ಅದನ್ನು ಕಟ್ಟಿಸುವುದಿಲ್ಲವೆಂದು ಹೇಳಿ .

ಉಪಾಧ್ಯಕ್ಷರು : ಮುಖ್ಯ ಮಂತ್ರಿಗಳು ಹೇಳಿದ್ದಾರಲ್ಲಾ ಕಟ್ಟಿಸುವುದಕ್ಕೆ ಬಿಡುವುದಿಲ್ಲ ಎಂದು.

ಶ್ರೀ ಎಂ. ವೀರಪ್ಪ ಮೊಯಿಲಿ : 3 ಎಕರೆ ಅದು ಕೂಡ ಕಟ್ಟಿ ಮುಗಿಸಿ ಹಾಕುತ್ತಿದ್ದರು. ಎಲ್ಲಾ ಪರವಾನಗಿ ಕೊಟ್ಟು ಆಗಿದೆ, ಲೀಸ್ ಆಗಿದೆ, ನಾನು ಏನೂ ಮಾಡುವುದಕ್ಕಾಗುವುದಿಲ್ಲವೆಂದು

ನೆಟ್ಟಗೆ ಕುಳಿತುಕೊಳ್ಳಬಹುದಿತ್ತು. ನಾನು ಅದು ಮಾಡಲಿಕ್ಕೆ ಹೋಗಲಿಲ್ಲ. ನಾನು ಕಾರ್ಪೋರೇಷನ್ ಕಮೀಷನರ್ , ಪೋಲೀಸ್ ಕಮಿಷನರ್ ಇಬ್ಬರನ್ನು ಕಳುಹಿಸಿ ಸ್ಥಳ ಪರಿಶೀಲನೆ ಮಾಡಿಸಿ ಒಂದು ಏಕರೆ 4 ಗುಂಟೆ ಏನಿದೆ, ಅದನ್ನು ಕಟ್ಟಿದಂಥ ಜಾಗ ಬಿಟ್ಟು 3 ಎಕರೆ 24 ಗುಂಟೆಯನ್ನು ಉಳಿಸಿ ಕಾಂಪೌಂಡ್ ವಾಲ್ ಹಾಕಿ ಸಾರ್ವಜನಿಕರಿಗೆ ಆಡಲಿಕ್ಕೆ ಬಿಡಬೇಕೆಂದು ಹೇಳಿದಂತ ನಿರ್ಣಯದ ಮೇಲೆ ಕೂಡ ಒಂದು ಅಪ್ರೀಸಿಯೇಷನ್ ನಮ್ಮ ಬೈರೇಗೌಡರ ಹತ್ತಿರ ಇಲ್ಲದಿದ್ದರೆ ಬಹಳ ಕಷ್ಟ.

ಶ್ರೀ ಆರ್. ವಿ. ದೇಶಪಾಂಡೆ – ನನಗೆ ಬಂದ ಮಾಹಿತಿ ಪ್ರಕಾರ ಈಗ ಕೌನ್ಸಿಲ್ ಅಡ್ಜರ್ನ್ ಆಗಿದೆ. ಮುಖ್ಯ ಮಂತ್ರಿಗಳೇ, ಪಾರ್ಲಿಮೆಂಟ್ ಮಿನಿಸ್ಟರು ಇದ್ದಾರೆ. ನಿಮಗೆ ಮುಖ್ಯವಾಗಿ ಇಲ್ಲಿ ಯಾವ ಬಿಲ್ ಪಾಸ್ ಆಗಬೇಕು ಅದನ್ನು ಮಾತ್ರ ಮಾಡಿಕೊಳ್ಳಿ. ಇಲ್ಲಿ ಪಾಸ್ ಆಗಿ ಅಲ್ಲಿ ಹೋಗುವ ಅವಶ್ಯಕತೆ ಇರುವುದಕ್ಕೆ ಸುಮ್ಮನೆ ಸಮಯವನ್ನು ಹಾಳು ಮಾಡುವುದು ಬೇಡ. ಅಲ್ಲಿ ಯಾವ ಬಿಲ್ ಪಾಸ್ ಆಗಿ ಇಲ್ಲಿ ಬಂದಿದೆ ಅದರ ಬಗ್ಗೆ ಚರ್ಚೆ ಆಗಲಿ ಏಕೆಂದರೆ ಅಲ್ಲಿ ಹೌಸ್ ಅಡ್ಜರ್ನ್ ಆಗಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರತಕ್ಕ ಎರಡು ವಿಧೇಯಕಗಳು ತುಂಬಾ ಇತಿಹಾಸಕರವಾದ ವಿಧೇಯಕಗಳು. ತಾವುಗಳೆಲ್ಲಾ ಆ ಸಂದರ್ಭದಲ್ಲಿ ಮಂಡನೆ ಮಾಡತಕ್ಕ ಸಂದರ್ಭದಲ್ಲಿ ಕೂಡ ಇದಕ್ಕೆ ತುಂಬಾ ಪ್ರಾಮುಖ್ಯತೆ ಕೊಟ್ಟುಕೊಂಡು ಓದಬೇಕು, ವಿಚಾರ ಮಾಡಬೇಕು, ಚರ್ಚೆ ಮಾಡಬೇಕು ಮತ್ತು ಎಲ್ಲಾ ವಿರೋಧ ಪಕ್ಷಗಳನ್ನು ಕೂಡ ವಿಶ್ವಾಸಕ್ಕೆ ತೆಗೆದುಕೊಂಡು ಇಂಥ ವಿಧೇಯಕಗಳನ್ನು ಪಾಸ್ ಮಾಡುವುದರಿಂದ ರಾಜ್ಯದಲ್ಲಿ ಒಂದು ಉತ್ತಮ ವಾತಾವರಣವನ್ನು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಏರ್ಪಡಿಸುವುದಕ್ಕೆ ಸಾಧ್ಯ ಎಂಬ ಅಭಿಪ್ರಾಯ ಏನು ಕೊಟ್ಟಿದ್ದೀರಿ ಅದಕ್ಕೆ ಸ್ಪಂದಿಸತಕ್ಕ ಕೆಲಸವನ್ನು ಸರ್ಕಾರ ಇವತ್ತು ಮಾಡುತ್ತಿದೆ. ಆ ದೃಷ್ಟಿಯಿಂದ ಸ್ವಲ್ಪ ನಾವು ವಿಚಾರ ಮಾಡೋಣ. ಏಕೆಂದರೆ ಮಸೂದೆ ಈಗಾತನೇ ತಮ್ಮ ಕೈಗೆ ಸಿಕ್ಕುತ್ತಿರುವುದರಿಂದ ಕಾಲಾವಕಾಶ ಬೇಕಾಗುತ್ತದೆ, ಆದುದರಿಂದ ಎರಡು ಮಸೂದೆಗಳನ್ನು ಚರ್ಚೆಗೆ ಎತ್ತಿಕೊಳ್ಳುವುದಕ್ಕೆ ಮುಂದೆ ಹಾಕಬಹುದೆಂದು ನನ್ನ ಅಭಿಪ್ರಾಯ.

ಉಪಾಧ್ಯಕ್ಷರು : ಈಗ ಕಾರ್ಯದರ್ಶಿಯವರು ವಿಧಾನ ಪರಿಷತ್ತಿನಿಂದ ಅಂಗೀಕೃತನಾದ ವಿಧೇಯಕಗಳನ್ನು ಮಂಡಿಸುವುದು :

ಕಾರ್ಯದರ್ಶಿ : ಮಾನ್ಯ ಉಪಾಧ್ಯಕ್ಷರೇ, ವಿಧಾನ ಪರಿಷತ್ತಿನಿಂದ ಅಂಗೀಕೃತನಾದ ಈ ಕೆಳಕಂಡ ಮಸೂದೆಗಳನ್ನು ನಾನು ಸಭೆಯ ಮುಂದಿಡುತ್ತಿದ್ದೇನೆ:

1) ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕ 1994

2) ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕ 1994

ಉಪಾಧ್ಯಕ್ಷರು :- ಮಂಡಿಸಲಾಯಿತುಅನುಬಂಧ VH , ಅನುಬಂಧ VIII.

Sri .R.V.Deshapande :- Whether it is passed there?

Sri S.M.Yahya :- Now we may call the Council for a day and all these Bills will be passed and that is what we have